ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002.
ದೂರವಾಣಿ-080-22213530/22241325 ಫ್ಯಾಕ್ಸ್ : 080-22214379 ಇ-ಮೇಲ್ : kanbhavblr@gmail.com
ವೆಬ್ ಸೈಟ್: www.kannadasiri.in

DKC-49001/2/2021 ದಿನಾಂಕ:05.03.2022

# ಕಚೇರಿ ಆದೇಶ

ವಿಷಯ : 2021-22ನೇ ಸಾಲಿನ ವಿವಿಧ ಅಕಾಡೆಮಿಗಳ ಕಾರ್ಯಚಟುವಟಿಕೆಗಳಿಗಾಗಿ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1.ಸರ್ಕಾರದ ಆದೇಶ ಸಂಖ್ಯೆ:ಕಸಂವಾ/115/ಕಸಧ/2021 ಬೆಂಗಳೂರು. ದಿ:31.05.2021.
2. ಸರ್ಕಾರದ ಆದೇಶ ಸಂಖ್ಯೆ:ಕಸಂವಾ 115 ಕಸಧ 2021 ದಿನಾಂಕ:08.06.2021.
3.ಸರ್ಕಾರದ ಆದೇಶ ಸಂಖ್ಯೆ: ಕಸಂವಾ 115 ಕಸಧ 2021 ದಿನಾಂಕ:10.08.2021
4. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 115 ಕಸಧ 2021 ದಿನಾಂಕ:10.08.2021
5. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 115 ಕಸಧ 2021 ದಿನಾಂಕ:02.11.2021
6. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 47 ಕಸಧ 2022 ದಿನಾಂಕ:04.03.2022

*****

## ಪ್ರಸ್ತಾವನೆ:

ಇಲಾಖೆಯ ಅಧೀನದಲ್ಲಿರುವ ವಿವಿಧ ಅಕಾಡೆಮಿಗಳ ಕಾರ್ಯಚಟುವಟಿಕೆಗಳಿಗೆ ಹಾಗೂ ವೇತನ ವೆಚ್ಚಗಳಿಗೆ ಕ್ರಿಯಾ ಯೋಜನೆಯಲ್ಲಿ 13 ವಿವಿಧ ಅಕಾಡೆಮಿಗಳಿಗೆ **ಲೆಕ್ಕಶೀರ್ಷಿಕೆ:2205-00-102-4-13-103**ರಡಿ **ರೂ.700.00ಲಕ್ಷಗಳಿಗೆ** ಅವಕಾಶ ಮಾಡಿಕೊಳ್ಳಲಾಗಿದೆ. ಈ ಮೊತ್ತದಲ್ಲಿ ಒಂದನೇ, ಎರಡನೇ, ಮೂರನೇ ಕಂತಿನ ಅನುದಾನವಾಗಿ ಪ್ರತಿ ಕಂತಿಗೆ ರೂ.162.50ಲಕ್ಷ ಈಗಾಗಲೇ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಉಲ್ಲೇಖಿತ(6) ಸರ್ಕಾರದ ಆದೇಶದಂತೆ ನಾಲ್ಕನೇ ಹಾಗೂ ಕೊನೆಯ ಕಂತಾಗಿ **ರೂ.175.00ಲಕ್ಷಗಳನ್ನು** ವಿವಿಧ ಅಕಾಡೆಮಿಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಪರಿಶೀಲಿಸಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ:

2021-22ನೇ ಸಾಲಿನ ವಿವಿಧ ಅಕಾಡೆಮಿಗಳ ಕಾರ್ಯಚಟುವಟಿಕೆಗಳಿಗೆ ಹಾಗೂ ವೇತನ ವೆಚ್ಚಗಳಿಗೆ ನಾಲ್ಕನೇ ಕಂತಿನ ಅನುದಾನವಾಗಿ ಒಟ್ಟಾರೆ ವಿವಿಧ 13 ಅಕಾಡೆಮಿಗಳಿಗೆ **ರೂ.160.00ಲಕ್ಷ (ರೂಪಾಯಿ ಒಂದು ಕೋಟಿ ಅರುವತ್ತು ಲಕ್ಷ ಮಾತ್ರ)**ಗಳನ್ನು ರಿಜಿಸ್ಟ್ರಾರ್/ಸದಸ್ಯ ಕಾರ್ಯದರ್ಶಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು, ಬಿಡುಗಡೆ ಮಾಡಿದೆ. ಸದರಿ ಅನುದಾನವನ್ನು ಖಜಾನೆ-2ರಲ್ಲಿ ಅನುದಾನದ ಬಿಲ್ಲಿನ ಮೇಲೆ ಡ್ರಾ ಮಾಡಿ ಪಾವತಿಸಲು ಆದೇಶಿಸಿದೆ.

## ಷರತ್ತುಗಳು:

1. ಅಕಾಡೆಮಿಗಳು/ಸಾಂಪ್ರದಾಯಿಕ ಗುರುಕುಲ ಕೇಂದ್ರಗಳು 2021-22ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ನಿಗದಿ ಮಾಡಿಕೊಂಡಿರುವ ಆಯಾ ಕಾರ್ಯಕ್ರಮಗಳಿಗೆ ಮಾತ್ರ ಅನುದಾನ ವೆಚ್ಚ ಮಾಡತಕ್ಕದ್ದು. ಬೇರೆ ಯಾವುದೇ ಉದ್ದೇಶಕ್ಕೆ ವೆಚ್ಚ ಮಾಡತಕ್ಕದ್ದಲ್ಲ.
2. ಮಂಜೂರು ಮಾಡಿದ ಹಣಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000 ಮತ್ತು ಸರ್ಕಾರ ಆಗಿಂದಾಗ್ಗೆ ಹೊರಡಿಸಿದ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

| ಕ್ರ.ಸಂ. | ಅಕಾಡೆಮಿಗಳ ಹೆಸರು | ಬಿಡುಗಡೆ ಮಾಡಲಾದ ನಾಲ್ಕನೇ ಕಂತಿನ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು **(Recipient ID -1000193014)** | 15.00 |

| | | |
|---|---|---|
| 2 | ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು<br>**(Recipient ID -1000193024)** | 15.00 |
| 3 | ರಿಜಿಸ್ಟ್ರಾರ್, ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ ಬೆಂಗಳೂರು<br>**(Recipient ID -1000193026)** | 15.00 |
| 4 | ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲೆ ಅಕಾಡೆಮಿ ಬೆಂಗಳೂರು<br>**(Recipient ID -1000193020)** | 15.00 |
| 5 | ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು<br>**(Recipient ID -1000193025)** | 15.00 |
| 6 | ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು<br>**(Recipient ID -1000193021)** | 15.00 |
| 7 | ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು<br>**(Recipient ID -1000193018)** | 15.00 |
| 8 | ರಿಜಿಸ್ಟ್ರಾರ್, ಕರ್ನಾಟಕ ಬಯಲಾಟ ಅಕಾಡೆಮಿ ಬಾಗಲಕೋಟೆ<br>**(Recipient ID -1701789134)** | 9.00 |
| 9 | ರಿಜಿಸ್ಟ್ರಾರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು<br>**(Recipient ID -1000193008)** | 10.00 |
| 10 | ರಿಜಿಸ್ಟ್ರಾರ್, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಮಂಗಳೂರು<br>**(Recipient ID -1000193022)** | 9.00 |
| 11 | ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಡಿಕೇರಿ<br>**(Recipient ID -1000193015)** | 9.00 |
| 12 | ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ-ಸಂಸ್ಕೃತಿ ಸಾಹಿತ್ಯ ಅಕಾಡೆಮಿ ಮಡಿಕೇರಿ<br>**(Recipient ID -1000185221)** | 9.00 |
| 13 | ರಿಜಿಸ್ಟ್ರಾರ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮಂಗಳೂರು<br>**(Recipient ID -1000185303)** | 9.00 |
| | **ಒಟ್ಟು** | **1,60,00,000** |

ಈ ವೆಚ್ಚವನ್ನು 2020-21ನೇ ಸಾಲಿನ **ಲೆಕ್ಕಶೀರ್ಷಿಕೆ:2205-00-102-4-13-103**ರಡಿ ಭರಿಸತಕ್ಕದ್ದು. ಈ ಆದೇಶವನ್ನು ಮಾನ್ಯ ಇಲಾಖಾ ನಿರ್ದೇಶಕರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ, ನಾಟಕ, ಸಂಗೀತ-ನೃತ್ಯ, ಲಲಿತಕಲಾ, ಜಾನಪದ, ಶಿಲ್ಪಕಲಾ, ಯಕ್ಷಗಾನ, ಬಯಲಾಟ, ತುಳು ಸಾಹಿತ್ಯ, ಬ್ಯಾರಿ ಸಾಹಿತ್ಯ, ಕೊಡವ ಸಾಹಿತ್ಯ,, ಅರೆಭಾಷೆ, ಕೊಂಕಣಿ ಸಾಹಿತ್ಯ ಅಕಾಡೆಮಿ ಇವರಿಗೆ ಮುಂದಿನ ಕ್ರಮಕ್ಕಾಗಿ.
4. ವಲಯ ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ ಇವರಿಗೆ ಮಾಹಿತಿಗಾಗಿ.
5. ಲೆಕ್ಕಪತ್ರ ಅಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
6. ಅಧೀಕ್ಷಕರು ಲೆಕ್ಕಪತ್ರ ಶಾಖೆ, ಕೇಂದ್ರ ಕಚೇರಿ ಬೆಂಗಳೂರು ಇವರಿಗೆ ಟಿ.ಎನ್.ಎಮ್.ಸಿ. ಗೆ ಹಣ ಅಪ್‌ಲೋಡ್ ಮಾಡಲು ಮತ್ತು ಹಂಚಿಕೆ ನಮೂದಿಸಲು ಹಾಗೂ ಬಿಲ್ಲು ತಯಾರಿಸಲು ಆದೇಶಿಸಿದೆ.
7. ಕಡತಕ್ಕೆ.